# ಪ್ರಹಸನ ಪ್ರಸಂಗ

ಸರ್ದಾರ್ಜಿ ತುಂಬ ಕಷ್ಟದಲ್ಲಿದ್ದರು. ಅವರಿಗೆ ವ್ಯಾಪಾರದಲ್ಲಿ ತುಂಬ ನಷ್ಟವಾಗಿತ್ತು. ಬೇರೆ ದಾರಿಕಾಣದೆ ಸಂಕಟದಲ್ಲಿ ವೆಂಕಟ ರಮಣ ಎಂಬಂತೆ ದೇವರ ಮೊರೆಹೊಕ್ಕರು. ಒಂದು ದೇವಾಲಯಕ್ಕೆ ಹೋಗಿ ದೇವರನ್ನು ಹೀಗೆ ಪ್ರಾರ್ಥಿಸಿದರು.: "ದೇವರೆ, ದಯವಿಟ್ಟು ಸಹಾಯ ಮಾಡು. ನಾನು ವ್ಯಾಪಾರವನ್ನು ಕಳೆದು ಕೊಂಡೆ. ನನಗೆ ಈಗ ಸ್ವಲ್ಪ ಹಣ ಸಿಕ್ಕದಿದ್ದರೆ ನಾನು ಮನೆಯನ್ನೂ ಕಳೆದುಕೊಳ್ಳುತ್ತೇನೆ. ನಾನು ಲಾಟರಿಯಲ್ಲಿ ಗೆಲ್ಲುವಂತೆ ಮಾಡು."

ಲಾಟರಿಯಲ್ಲಿ ಬೇರೆ ಯಾರೊ ಗೆದ್ದು ಹಣ ಗಳಿಸಿದರು. ಸರ್ದಾರ್ಜಿ ದೇವಾಲಯಕ್ಕೆ ಮತ್ತೆ ಹೋಗಿ ಪ್ರಾರ್ಥಿಸಿದರು : "ಹೇ ಪ್ರಭು. ನಾನು ಲಾಟರಿಯಲ್ಲಿ ಗೆಲ್ಲುವಂತೆ ಮಾಡು. ನನ್ನ ವ್ಯಾಪಾರವೂ ಹೋಯಿತು, ಮನೆಯೂ ಹೋಯಿತು, ಈಗ ನಾನು ಕಾರನ್ನೂ ಕಳೆದುಕೊಳ್ಳುತ್ತೇನೆ."

ಈ ಬಾರಿಯೂ ಲಾಟರಿಯಲ್ಲಿ ಸರ್ದಾರ್ಜಿ ಗೆಲ್ಲಲಿಲ್ಲ. ಮತ್ತೆ ದೇವಾಲಯಕ್ಕೆ ಹೋಗಿ "ಹೇ ದಯಾಮಯ, ಯಾಕೆ ನನ್ನನ್ನು ನೀನು ಕೈಬಿಟ್ಟೆ? ನನ್ನ ವ್ಯಾಪಾರವೂ ಹೋಯಿತು, ಮನೆಯೂ ಹೋಯಿತು, ಕಾರೂ ಹೋಯಿತು. ನನ್ನ ಹೆಂಡತಿ ಮಕ್ಕಳು ಹಸಿವೆಯಿಂದ ನರಳುತ್ತಿದ್ದಾರೆ. ನಾನು ಯಾವಾಗಲೂ ನಿನ್ನ ಸಹಾಯವನ್ನು ಕೇಳುವುದಿಲ್ಲ. ಮತ್ತೆ ಯಾವಾಗಲೂ ನಿನಗೆ ವಿಧೇಯನಾಗಿಯೇ ಇದ್ದೇನೆ. ಒಮ್ಮೆಯಾದರೂ ನಾನು ಲಾಟರಿಯಲ್ಲಿ ಗೆಲ್ಲುವಂತೆ ಮಾಡು."

ಕೂಡಲೆ ಕಣ್ಣು ಕೋರೈಸುವ ಬೆಳಕು ಕಾಣಿಸಿತು. ಒಂದು ಅಪೂರ್ವ ಧ್ವನಿ ಕೇಳಿಸಿತು: "*ಸರ್ದಾರ್ಜಿ, ಮೊದಲು ಲಾಟರಿ ಟಿಕೆಟನ್ನು ಕೊಂಡುಕೊ.*"

ನಾವೂ ಆಧ್ಯಾತ್ಮಿಕ ಜೀವನದಲ್ಲಿ ಸುದೀರ್ಘ ಸಾಧನೆ ಮಾಡುತ್ತೇವೆ. ಇಷ್ಟು ಸಾಧನೆ ಮಾಡಿದರೂ ಏನೂ ಆಗುತ್ತಿಲ್ಲ ಎಂದು ಗೋಳಿಡುತ್ತೇವೆ. ಆದರೆ ವೈರಾಗ್ಯವನ್ನು ನಾವು ಪಡೆದಿರುವುದೇ ಇಲ್ಲ. ಟಿಕೆಟ್ ತೆಗೆದುಕೊಳ್ಳದೆ ಲಾಟರಿಯಲ್ಲಿ ಗೆಲ್ಲಲು ಆಗದಿರುವಂತೆ ವೈರಾಗ್ಯವಿಲ್ಲದೆ ಸಾಧನೆಯಲ್ಲಿ ಜಯಗಳಿಸಲಾಗುವುದಿಲ್ಲ.

* * *

ನಮಗೆ ಹೊರಗಿನ ಸನ್ನಿವೇಶಗಳಿಂದ ತೊಂದರೆಗಳು ಉಂಟಾಗುತ್ತಿದ್ದರೆ, ನಾವು ಸನ್ನಿವೇಶಗಳನ್ನು ಬದಲಾಯಿಸುವ ಪ್ರಯತ್ನ ಮಾಡುವ ಬದಲು, ಆ ತೊಂದರೆಗಳ ದುಷ್ಪರಿಣಾಮಗಳಿಗೆ ನಾವು ಒಳಗಾಗದಂತೆ ನಮ್ಮನ್ನು ನಾವು ಬಲಪಡಿಸಿಕೊಳ್ಳಬೇಕು. ಸನ್ನಿವೇಶವನ್ನು ಬದಲಾಯಿಸಲು ಸಾಧ್ಯವಿಲ್ಲ, ಒಂದೊಮ್ಮೆ ಬದಲಾಯಿಸಲು ಸಾಧ್ಯವಾದರೂ ಆ ಬದಲಾದ ಸನ್ನಿವೇಶದಿಂದ ನಮಗೆ ಮತ್ತಷ್ಟು ತೊಂದರೆಯೇ ಆಗಬಹುದು.

ಪುರಾತನ ಕಾಲದಲ್ಲಿ ಒಮ್ಮೆ ಕ್ರೈಸ್ತನೊಬ್ಬನನ್ನು ಒಂದು ಸಿಂಹ ಹಿಂಬಾಲಿಸತೊಡಗಿತು. ಕ್ರೈಸ್ತನು ಅದರಿಂದ ತಪ್ಪಿಸಿಕೊಳ್ಳಲು ಜೋರಾಗಿ ಓಡತೊಡಗಿದ. ಊರಿನ ಗಲ್ಲಿಗಲ್ಲಿಗಳಲ್ಲೆಲ್ಲ ಓಡಿದ್ದಾಯಿತು. ಹೀಗೆ ಓಡುತ್ತ ಅವನು ಕಾಡನ್ನು ಪ್ರವೇಶಿಸಿದ. ಸಿಂಹ ಅವನ ಹಿಂದೆಯೇ ಇತ್ತು. ಇನ್ನು ಇದರಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲವೆಂದು ಅವನು ಭಾವಿಸಿದನು. ಇನ್ನೇನು ಮಾಡುವುದು ಎಂದು ಆಲೋಚಿಸುತ್ತಿರುವಾಗ ಅವನಿಗೆ ಒಂದು ಉಪಾಯ ಹೊಳೆಯಿತು. ಅವನು ಓಡುವುದನ್ನು ನಿಲ್ಲಿಸಿ, ಸಿಂಹದ ಕಡೆ ತಿರುಗಿ, ಮಂಡಿ ಯೂರಿ ಹತಾಶನಾಗಿ ಪ್ರಾರ್ಥಿಸತೊಡಗಿದ: "ಹೇ ಪ್ರಭು, ಈ ಸಿಂಹವನ್ನು ಕ್ರೈಸ್ತನನ್ನಾಗಿ ಮಾಡು." ಅವನ ಪ್ರಾರ್ಥನೆ ಸಫಲವಾಯಿತು. ಕೂಡಲೆ ಸಿಂಹವು ಮಂಡಿಯೂರಿ ಪ್ರಾರ್ಥಿಸತೊಡಗಿತು: "ಹೇ ಪ್ರಭು, ನನಗೀಗ ಒಳ್ಳೆಯ ಊಟವನ್ನು ಕರುಣಿಸಿದ್ದಕ್ಕಾಗಿ ನಿನಗೆ ಅನಂತ ಧನ್ಯವಾದಗಳು." ಹೀಗೆ ಪ್ರಾರ್ಥಿಸಿ ಸಿಂಹವು ಆ ಕ್ರೈಸ್ತನ ಮೇಲೆರಗಿತು.

* * *

ಸಾವು ಅಷ್ಟೊಂದು ಭಯಂಕರವಲ್ಲದಿದ್ದರೂ ಸಾವಿನ ಸುದ್ದಿ ಅತ್ಯಂತ ಭಯಂಕರವಾಗಿರುತ್ತದೆ. ಯಾವ ಕ್ಷಣವಾದರೂ ನಮಗೆ ಸಾವು ಬರಬಹುದು. ಆದ್ದರಿಂದ ಸಾವಿಗೆ ಸಿದ್ಧವಾಗಿರುವ ಮನಸ್ಥಿತಿಯಲ್ಲಿ ನಾವಿರಬೇಕು.

*ಡಾಕ್ಟರ್* : ಒಂದು ಕೆಟ್ಟ ಸುದ್ದಿ ಮತ್ತು ಅತ್ಯಂತ ಕೆಟ್ಟ ಸುದ್ದಿ ಇದೆ.

*ರೋಗಿ* : ಹೌದೆ! ಮೊದಲು ಕೆಟ್ಟ ಸುದ್ದಿಯನ್ನೇ ತಿಳಿಸಿ.

*ಡಾಕ್ಟರ್* : ಲ್ಯಾಬ್‌ನಿಂದ ಪರೀಕ್ಷೆಯ ಫಲಿತಾಂಶ ಬಂದಿದೆ. ಅವರು ಹೇಳುತ್ತಾರೆ ನೀನು ೨೪ ಗಂಟೆ ಬದುಕಿರುತ್ತೀಯೆ ಎಂದು.

*ರೋಗಿ* :ಹ್ಹಾ! ಹೌದೆ! ಅಯ್ಯೊ! ಇದು ಭಯಂಕರ ಸುದ್ದಿ! ಇದೇ ಇಷ್ಟೊಂದು ದಾರುಣ, ಇನ್ನು ಅತ್ಯಂತ ಕೆಟ್ಟ ಸುದ್ದಿ ಯಾವುದು?

*ಡಾಕ್ಟರ್* : ನಾನು ನಿನ್ನೆಯಿಂದಲೂ ನಿನ್ನನ್ನು ಸಂಧಿಸಿ ಈ ಸುದ್ದಿಯನ್ನು ತಿಳಿಸಲು ಪ್ರಯತ್ನಿಸಿದೆ. ಆಗಲೇ ಇಲ್ಲ. *

**ಆಶ್ರಮದ ಕಾರ್ಯಕ್ರಮಗಳು**

**ಮಾರ್ಚ್ 2003**

| | | |
|---|---|---|
| *ಮಹಾಶಿವರಾತ್ರಿ* | ಶನಿವಾರ | 1 |
| *ಶ್ರೀ ರಾಮಕೃಷ್ಣ ಜಯಂತಿ* | ಬುಧವಾರ | 5 |
| *ಏಕಾದಶಿ* | ಶುಕ್ರವಾರ | 14 |
| *ಶ್ರೀ ಚೈತನ್ಯ ಜಯಂತಿ* | ಮಂಗಳವಾರ | 18 |
| *ಸ್ವಾಮಿ ಯೋಗಾನಂದ ಜಯಂತಿ* | ಶುಕ್ರವಾರ | 21 |
| *ಏಕಾದಶಿ* | ಶನಿವಾರ | 29 |